**ಮೂ.ದಾ.ನಂ. 53/2024**

ಪಿ.ಡಬ್ಲ್ಯು.1

(ಇಂದು ದಿನಾಂಕ: **17-03-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. B.D.S. ವಕೀಲರಿಂದಃ**

ನನ್ನ ತಂದೆಯ ಹೆಸರು ಹೊಸಬಯ್ಯಾ ಎಂದರೆ ಸರಿ. ಅವರಿಗೆ 6 ಜನ ಗಂಡು ಮಕ್ಕಳು ಎಂದರೆ ಸರಿ. ನಾವು 6 ಜನರಲ್ಲಿ 4 ಜನರು ಹೊರಗಡೆ ಇರುತ್ತೇವೆ. ಊರಿನಲ್ಲಿ ವಿಠೋಬಾ ಹಾಗೂ ಅನಂತ ಇದ್ದರು. ದಾವಾ ಅಸ್ತಿಗಳೆಲ್ಲವೂ ಕೂಡ ಪಿತ್ರಾರ್ಜಿತ ಆಸ್ತಿ ಆಗಿರುತ್ತವೆ ಎಂದರೆ ಸರಿ. ದಾವಾಸ್ತಿಗಳಲ್ಲಿ 6 ಜನರಿಗೂ ಸಹ ತಲಾ 1/6 ಅಂಶ ಹಕ್ಕು ಇದೆ ಎಂದರೆ ಸರಿ. 2ನೇ ಪ್ರತಿವಾದಿ 10 ವರ್ಷದ ಹಿಂದೆ ದಾವಾಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡು ವಾಸ್ತವ್ಯದಲ್ಲಿ ಇದ್ದಾರೆ. ಸದ್ರಿ ಮನೆಯನ್ನು ಸಂಪೂರ್ಣವಾಗಿ ಅವರ ಖರ್ಚಿನಿಂದಲೇ ಮಾಡಿರುತ್ತಾರೆ.

ಸರ್ವೆ ನಂಬರ 83 ಬಾಡಾ ಅಘನಾಶಿನಿ ರಸ್ತೆಗೆ ಹೊಂದಿಕೊಂಡು ಇದೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯು 88 ಹಿಸ್ಸಾ 3 ರಲ್ಲಿ ಅಂಗಡಿಯನ್ನು ಕಟ್ಟಿಕೊಂಡು ಇದ್ದಾರೆ. ಸದ್ರಿ ಅಂಗಡಿಯನ್ನು ಅವರ ಸ್ವಂತ ಖರ್ಚಿನಿಂದ ಕಟ್ಟಿರುತ್ತಾರೆ. ವಾಂಟಣಿಯ ಕಾಲದಲ್ಲಿ 2ನೇ ಪ್ರತಿವಾದಿಯು ಕಟ್ಟಿದ ಅಂಗಡಿಯನ್ನು ಅವರ ಹಿಸ್ಸೆಗೆ ನೀಡಲು ನನಗೆ ತಕರಾರು ಇದೆ. ಮನೆಯ ಜಾಗವನ್ನು ಅವರ ಹೆಸರಿಗೆ ವಿಂಗಡಣೆ ಮಾಡಲು ನಮ್ಮದ್ದು ಯಾವುದೇ ತಕರಾರು ಇರುವುದಿಲ್ಲ. 2ನೇ ಪ್ರತಿವಾದಿಯು ಅಂಗಡಿಯನ್ನು ಕಟ್ಟುವ ಸಂದರ್ಭದಲ್ಲಿ ನಾನು ತಕರಾರನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಊರಲ್ಲಿ ಇಲ್ಲದ ಸಂದರ್ಭದಲ್ಲಿ ಮನೆಯನ್ನು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ನಾನು ಮುಂಬೈಯಲ್ಲಿ ಇದ್ದೇನು. ನಾನು ವರ್ಷಕ್ಕೆ 1-2 ಬಾರಿ ಊರಿಗೆ ಬರುತ್ತೇನೆ. ನಾನು ಮುಂಬೈಯಲ್ಲಿ

ಆದಾಯ ತೇರಿಗೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನು. ನಾನು ನನ್ನ ವೃತ್ತಿಯಿಂದ ಬಂದಂತಹ ಆದಾಯವನ್ನು ವಿನಿಯೋಗಿಸಿಕೊಂಡು ನಾನು ಮುಂಬೈನಲ್ಲಿ ಮನೆ ಹಾಗೂ ಆಸ್ತಿಯನ್ನು ಮಾಡಿರುತ್ತೇನೆ. ಕುಟುಂಬದ ಮೂಲ ಮನೆ ಮುಂಬೈಗೆ ಹೋಗುವ ವೇಳೆಯಲ್ಲಿ ನಮ್ಮ ಮೂಲ ಮನೆಯು ಹುಲ್ಲಿನ ಹೋದಿಕೆಯ ಮನೆ ಆಗಿತ್ತು ಎಂದರೆ ಸರಿ. ಈಗ ಅಲ್ಲಿ 1ನೇ ಪ್ರತಿವಾದಿಯು ಮನೆಯನ್ನು ಕಟ್ಟಿಕೊಂಡು ಇದ್ದಾನೆ.

3ನೇ ಪ್ರತಿವಾದಿಯು ಅವರ ಸ್ವಂತ ಖರ್ಚಿನಿಂದ ಮನೆಯನ್ನು ಕಟ್ಟಿಕೊಂಡು ಬಂದು ವಾಸ್ತವ್ಯದಲ್ಲಿ ಇದ್ದಾರೆ. ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನಮ್ಮ ಮನೆಯಲ್ಲಿ ನಮ್ಮ ಮನೆಯಲ್ಲಿ ನನ್ನ ತಾಯಿಯ ಜೀವಿತಾವಧಿಯಲ್ಲಿ ನನ್ನ ತಾಯಿ ಹಾಗೂ ಸಹೋದರರ ನಡುವೆ ತೊಂಡಿ ವಾಂಟಣಿ ಆಗಿರುತ್ತದೆ. ಸದ್ರಿ ತೊಂಡಣಿ ವಾಂಟಣಿಯನ್ನು 5 ರೂಪಾಯಿಯ ಸ್ಟಾಂಪ್ ಪೇಪರನಲ್ಲಿ ಬರೆದಿರುತ್ತೇವೆ. ಸದ್ರಿ ದಾಖಲಾತಿಯು 1ನೇ ಪ್ರತಿವಾದಿಯ ಕೈಯಲ್ಲಿ ಇದೆ. ಸದ್ರಿ ದಾಖಲಾತಿಯನ್ನು ಹಾಜರುಪಡಿಸಲು ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ಸದ್ರಿ ದಾಖಲಾತಿಗಳನ್ನು ಹಾಜರುಪಡಿಸುವ ಸಂದರ್ಭ ನಮಗೆ ಸಿಗಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ನಡುವೆ ತೊಂಡಿ ವಾಂಟಣಿ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ನಡುವೆ ಅಧಿಕೃತವಾಗಿ ಯಾವುದೇ ವಾಂಟಣಿ ಆಗಿರುವುದಿಲ್ಲ. ಇವತ್ತೀಗೂ ಸಹ ನಮ್ಮ ಕುಟುಂಬದ ಎಲ್ಲಾ ಕೆಲಸ ಕಾರ್ಯಗಳನ್ನು ನಾವು ಎಲ್ಲಾ ಸಹೋದರರು ಸೇರಿ ಮಾಡುತ್ತೇವೆ. ನಮ್ಮ ಕುಟುಂಬ ಆಸ್ತಿಗಳ ಪೈಕಿ ಸರ್ವೆ ನಂಬರ 88 ಹಿಸ್ಸಾ 3 ರಸ್ತೆಗೆ ಹೊಂದಿಕೊಂಡಿದೆ ಎಂದರೆ ಸರಿ. ಉಳಿದ ಆಸ್ತಿಗಳು ರಸ್ತೆಯಿಂದ ಒಳಗಿನ ಭಾಗಕ್ಕೆ ಇದೆ ಎಂದರೆ ಸರಿ. ನಮ್ಮ ಸಹೋದರರು ಕಟ್ಟಿಕೊಂಡು ಬಂದಂತಹ

**ಮೂ.ದಾ.ನಂ. 53/2024**

ಪಿ.ಡಬ್ಲ್ಯು.1

ಮನೆಗೆ ನೇರವಾಗಿ ಸಂಪರ್ಕ ಕಲ್ಪಿಸಲು ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಓಣಿ ಇದೆ ಎಂದು ನುಡಿಯುತ್ತಾರೆ. ಸದ್ರಿ ಓಣಿಯು 4 ಫೂಟು ಇದೆ. ದಾವಾಸ್ತಿಗಳು ತೆಂಗು ಹಾಗೂ ಇತರೇ ಫಲಗಳನ್ನು ಬಿಡುವ ಅಸ್ತಿಗಳು ಎಂದರೆ ಸರಿ. ತೆಂಗಿನಕಾಯಿಗಳನ್ನು ತೆಗೆದುಕೊಂಡು ಹೋಗಲು ವಾಹನದ ಅವಶ್ಯಕತೆ ಇದೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಒಳಬದಿಯ ಜಾಗವನ್ನು ನನ್ನ ಹಿಸ್ಸೆಗೆ ವಿಂಗಡಿಸಿದರೆ ನಾನು ತೆಗೆದುಕೊಳ್ಳಲು ತಯಾರ ಇರುವುದಿಲ್ಲ. ಈ ರೀತಿಯಾಗಿ ಹೇಳಲು ಸದ್ರಿ ಸ್ಥಳಕ್ಕೆ ಸಂಪರ್ಕ ರಸ್ತೆ ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾರ ಪ್ರಧಾನ ಸಿವಿಲ್ ಜಡ್ಜ, ಕುಮಟಾ